ಮೌಢ್ಯಾಚಾರದಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ. ವಿಷಜಂತುಗಳ ಕಡಿತಕ್ಕೆ ಜೀವಹಾನಿಯಾಗಲಿದೆ. ಮೌಢ್ಯಾಚರಣೆ ಮಾಡಿದವರ ವಿರುದ್ಧ ಕಾನೂನಿನ ಕ್ರಮ ಕೈಗೊಳ್ಳಬೇಕಾಗುತ್ತದೆ.
● **ವೈ.ಎಂ.ರೇಣುಕುಮಾರ್** ತಹಸೀಲ್ದಾರ್

ಗೊಲ್ಲರಹಟ್ಟಿ ಮಹಿಳೆ, ಮಗು ರಕ್ಷಿಸಿದ ತಹಸೀಲ್ದಾರ್

ನಾವು ಬೇಡ ಬೇಡ ಅಂದ್ರೂ ನಮ್ಮನ್ನು ಗುಡಾರದಲ್ಲಿ ಕೂಡಿ ಹಾಕ್ತಾರೆ | ಚಳಿ, ಮಳೆ, ವಿಷ ಜಂತುಗಳಿಂದ ಕಾಪಾಡಿ: ಮಹಿಳೆಯರ ಅಳಲು

● **ಕನ್ನಡಪ್ರಭ ವಾರ್ತೆ** ತುರುವೇಕೆರೆ

ಬೆಳ್ಳಂಬೆಳಗ್ಗೆ ನಾವು ಬೇಡ ಬೇಡ ಅಂದ್ರೂ ನಮ್ಮನ್ನು ಗುಡಾರದಲ್ಲಿ ಕೂಡಿ ಹಾಕಿದ್ದಾರೆ. ದಯಮಾಡಿ ನಮ್ಮನ್ನು ಚಳಿ, ಮಳೆ, ವಿಷಜಂತುಗಳಿಂದ ಕಾಪಾಡಿ ಸಾರ್ ಎಂದು ಮಾಯಸಂದ್ರ ಹೋಬಳಿ ವರಾಹ ಸಂದ್ರ ಗೊಲ್ಲರಹಟ್ಟಿಯ ಕೆಲ ಮಹಿಳೆಯವರು ತಹಸೀಲ್ದಾರ್ ವೈ.ಎಂ.ರೇಣುಕುಮಾರ್ ಅವರಿಗೆ ದೂರವಾಣಿ ಕರೆ ಮಾಡಿ ತಮ್ಮ ಅಳಲು ತೋಡಿಕೊಂಡರು.

ದಿಢೀರ್ ಕಾರ್ಯಾಚರಣೆಗೆ ಇಳಿದ ತಹಸೀಲ್ದಾರ್ ವೈ.ಎಂ.ರೇಣುಕುಮಾರ್ ಅವರು ವರಾಹಸಂದ್ರ ಗೊಲ್ಲಹಟ್ಟಿಗೆ ಬೆಳ್ಳಂಬೆಳಗ್ಗೆ 5.30 ಕ್ಕೆ ಪೋಲಿಸ್, ಕಂದಾಯ ಇಲಾಖಾ ನೌಕರರು ಸೇರಿದಂತೆ ವಿವಿಧ ಇಲಾಖಾ ಸಿಬ್ಬಂದಿಯೊಂದಿಗೆ ತೆರಳಿದರು.

ಋತುಮತಿಯಾಗಿದ್ದ ಮೂವರು ಯುವತಿಯರು, ಹದಿನೈದು ದಿನದ ಹಸುಗೂಸಿನೊಂದಿಗೆ ಬಾಣಂತಿ ಇದ್ದರು. ಆವರ ಸ್ಥಿತಿಯನ್ನು ಕಣ್ಣಾರೆ ಕಂಡ ತಹಸೀಲ್ದಾರ್ ಅವರು ಮಮ್ಮಲ ಮರುಗಿದರು. ಗುಡಾರದಿಂದ ಹೊರಬನ್ನಿ ಎಂದು ತಹಸೀಲ್ದಾರ್ ಅವರು ಸೂಚನೆ ನೀಡಿದರೂ ಮಹಿಳೆಯರು ಹೊರಬರಲು ಹಿಂದೇಟು ಹಾಕಿದರು. ಊರಿನ ಮುಖಂಡರ ಹೆದರಿಕೆ ಇದೆ ಎಂದು ಹೇಳಿ ಗುಡಾರದಿಂದ ಹೊರಬರಲು ನಿರಾಕರಿಸಿದರು.

ಗ್ರಾಮದ ಮುಖಂಡರನ್ನು ಕರೆತರಲು ತಹಸೀಲ್ದಾರ್ ಪೋಲಿಸರಿಗೆ ಸೂಚನೆ ನೀಡಿದರು. ಪೋಲಿಸರು ಮುಖಂಡನ ಮನೆ ಬಳಿ ಹೋಗುತ್ತಿದ್ದಂತೆ ಗ್ರಾಮದ ಮುಖಂಡ ಪರಾರಿಯಾಗಿದ್ದಾನೆ.

ತಹಸೀಲ್ದಾರ್ ರೇಣುಕುಮಾರ್ ಅವರು ಮೂಢನಂಬಿಕೆಯ ವಿರುದ್ಧ ಜಾಗೃತಿ ಮೂಡಿಸಿದರು.

ಇಂತಹ ಆಚರಣೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ. ವಿಷಜಂತುಗಳ ಕಡಿತಕ್ಕೆ ಜೀವಹಾನಿಯಾಗಲಿದೆ ಎಂದು ಮನವರಿಕೆ ಮಾಡಿಕೊಟ್ಟರು. ಮೌಢ್ಯಾಚರಣೆ ವಿರುದ್ಧ ಕಾನೂನಿನ ಕ್ರಮಗಳ ಬಗ್ಗೆಯೂ ಅಲ್ಲಿನ ಜನರಿಗೆ ಅರಿವು ಮೂಡಿಸಿದರು. ಗುಡಾರದಲ್ಲಿದ್ದ ಯುವತಿಯರು, ಬಾಣಂತಿ ಮತ್ತು ಮಗುವನ್ನು ಅಲ್ಲಿಂದ ರಕ್ಷಿಸಿ ಅವರ ಮನೆಗಳಿಗೆ ಕಳಿಸಿದರು.

ತುರುವೇಕೆರೆ ತಾಲೂಕು ವರಾಹಸಂದ್ರ ಗೊಲ್ಲರಹಟ್ಟಿಗೆ ಬೆಳ್ಳಂಬೆಳಗೆ ಭೇಟಿ ನೀಡಿದ ತಹಸೀಲ್ದಾರ್ ವೈ.ಎಂ. ರೇಣುಕುಮಾರ್ ಗುಡಾರಗಳಲ್ಲಿದ್ದ ಮಹಿಳೆಯರಿಗೆ ರಕ್ಷಣೆ ಮಾಡಿದರು.

- ಮಾಯಸಂದ್ರ ಹೋಬಳಿ ವರಾಹ ಸಂದ್ರ ಗೊಲ್ಲರಹಟ್ಟಿಯಲ್ಲಿ ಮುಂದುವರೆದ ಮೌಢ್ಯಾಚಾರ
- ಬಾಣಂತಿ, ಮಗು ಮತ್ತು ಋತುಮತಿಯಾದ ಮಹಿಳೆಯರು ಊರಾಚೆ ಗುಡಾರದಲ್ಲಿ ವಾಸ
- ತಹಸೀಲ್ದಾರ್ ವೈ.ಎಂ. ರೇಣುಕುಮಾರ್ ಅವರಿಗೆ ಮಹಿಳೆಯರು ಫೋನ್ ಕಾಲ್ ಮುಖಾಂತರ ದೂರು
- ಬಾಣಂತಿ, ಮಗುವಿನ ರಕ್ಷಣೆ

ನೀವೇ ಹೊಣೆ: ಕಾರ್ಯಾಚರಣೆ ವೇಳೆ ಗ್ರಾಮದ ಮಹಿಳೆ ಸಂಪ್ರದಾಯ ಬಿಡಕ್ಕಾಗಲ್ಲ. ಈಗ ನೀವು ಹೀಗೆ ಮಾಡಿದರೆ ನಮ್ಮ ದೇವರು ಸಿಟ್ಟಾಗ್ತಾನೆ. ಆಗ ಆಗುವ ತೊಂದರೆಗೆ ನೀವೇ ಜವಾಬ್ದಾರಿ ಎಂದು ತಹಸೀಲ್ದಾರ್‌ಗೆ ಎಚ್ಚರಿಕೆ ನೀಡಿದರು.

ಆಯ್ತು ಆ ದೇವರು ಕೊಡೋ ಶಿಕ್ಷೆನಾ ನಾನೇ ಅನುಭವಿಸುತ್ತೇನೆ. ನೀವೇನೂ ಯೋಚನೆ ಮಾಡಬೇಡಿ ಎಂದು ಹೇಳಿದ ತಹಸೀಲ್ದಾರ್ ಅವರು ಕಾಲ ಬದಲಾದಂತೆ ನಾವೂ ಬದಲಾಗಬೇಕು. ಹಿಂದೆ ನಿಮ್ಮ ಸಮುದಾಯದ ಹೆಣ್ಣು ಮಕ್ಕಳು, ಗಂಡಸರು ಹೇಗಿದ್ದರು.

ಈಗ ಉತ್ತಮವಾದ ಬಟ್ಟೆ ಹಾಕಿಕೊಳ್ಳುತ್ತಿಲ್ಲವಾ? ಚಪ್ಪಲಿ ಕಾಕಿಕೊಳ್ತಾ ಇಲ್ವಾ?. ಹಾಗೇ ದಿನಕಳೆದಂತೆ ನಾವೆಲ್ಲರೂ ಬದಲಾಗಬೇಕು ಎಂದು ಅಲ್ಲಿದ್ದ ಕೆಲವು ಮಹಿಳೆಯರಿಗೆ ಬುದ್ಧಿ ಮಾತು ಹೇಳಿದರು.

ಎಚ್ಚರಿಕೆ: ಇಂದು ತಾವು ನಿಮ್ಮೆಲ್ಲರಿಗೂ ಎಚ್ಚರಿಕೆ ನೀಡಿ ಕಾನೂನಿನ ಸಂಬಂಧ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಮುಂಬರುವ ದಿನಗಳಲ್ಲಿ ಇದೇ ಮೌಢ್ಯತೆ ಮುಂದುವರೆಸಿದಲ್ಲಿ ಗುಡಾರದಲ್ಲಿ ಕೂರುವವರು, ಅವರನ್ನು ಪ್ರಚೋದಿಸುವ ಕುಟುಂಬದ ಸದಸ್ಯರು ಮತ್ತು ಗ್ರಾಮದ ಮುಖಂಡರ ಮೇಲೆ ಕಾನೂನು ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು.

ಆ ವೇಳೆ ತಮಗೆ ರಕ್ಷಣೆ ನೀಡಿದ ತಹಸೀಲ್ದಾರ್ ಅವರಿಗೆ ಮಹಿಳೆಯರು ಕಣ್ಣೀರು ಹಾಕುವ ಮೂಲಕ ಧನ್ಯತೆ ಅರ್ಪಿಸಿದರು. ತಹಸೀಲ್ದಾರ್ ಅವರ ಕ್ರಮಕ್ಕೆ ತಾಲೂಕಿನಾದ್ಯಂತ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ.

ಸುದ್ದಿ ಸಿಂಚನ

ಕೆಪಿಸಿಸಿ ಕಾರ್ಮಿಕ ವಿಭಾಗ ಜಿಲ್ಲಾ ಕಾರ್ಯದರ್ಶಿಯಾಗಿ ಶ್ರೀನಿವಾಸಮೂರ್ತಿ ಆಯ್ಕೆ

ಕೊರಟಗೆರೆ: ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ಸಮಿತಿ ವಿಭಾಗದ ಜಿಲ್ಲಾ ಕಾರ್ಯದರ್ಶಿಯಾಗಿ ತಾಲೂಕಿನ

ಶ್ರೀನಿವಾಸಮೂರ್ತಿ ಆಯ್ಕೆಯಾಗಿದ್ದಾರೆ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಮಿಕ ವಿಭಾಗದ ರಾಜ್ಯಾಧ್ಯಕ್ಷ ಕೆ. ಪುಟ್ಟಸ್ವಾಮಿಗೌಡ, ತುಮಕೂರಿನ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಚಂದ್ರಶೇಖರ್‌ಗೌಡ, ಕೊರಟಗೆರೆ ಬ್ಲಾಕ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಕೋಡ್ಲಹಳ್ಳಿ ಆಶ್ವತ್ಥ್ ನಾರಾಯಣ್, ಅರಕೆರೆ ಶಂಕರ್ ಅವರ ಶಿಫಾರಸ್ಸಿನ ಮೇರೆಗೆ ಕೊರಟಗೆರೆ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಶ್ರೀನಿವಾಸಮೂರ್ತಿ ಅವರನ್ನು ಜಿಲ್ಲಾ ಕಾರ್ಯದರ್ಶಿಯನ್ನಾಗಿ ಸೂಚಿಸಿ ಆಯ್ಕೆ ಮಾಡಿದ್ದಾರೆ.

13ಕ್ಕೆ ವಿದ್ಯುತ್ ವ್ಯತ್ಯಯ

ತುಮಕೂರು: ಬೆವಿಕಂ ನಗರ ಉಪವಿಭಾಗ-1ರ ವ್ಯಾಪ್ತಿಯಲ್ಲಿ ದುರಸ್ತಿ ಕಾಮಗಾರಿ ಕೈಗೊಂಡಿರುವುದರಿಂದ 13ರಂದು ಬೆಳಿಗ್ಗೆ 11 ರಿಂದ ಸಂಜೆ 5ರವರೆಗೆ ಗೋವಿಂದನಗರ, ರಿಂಗ್‌ರಸ್ತೆ, ಗುಬ್ಬಿ ಗೇಟ್, ಕುಂಟಮ್ಮನತೋಟ, ದಿಬ್ಬೂರು, ಬಂಡೇಮನೆ ಚೌಟ್ರಿ, ಎಚ್.ಪಿ. ಪೆಟ್ರೋಲ್ ಬಂಕ್, ಬಿ.ಜಿ. ಪಾಳ್ಯ ಸರ್ಕಲ್, ಯುಜಿಡಿ, ದಾನಾಪ್ಯಾಲೇಸ್ ಹಿಂಭಾಗ ಪ್ರದೇಶಗಳಲ್ಲಿ ಮಧ್ಯಂತರ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ.

ಶ್ರೀಕೃಷ್ಣ ಸಂಧಾನ ನಾಟಕ ಪ್ರದರ್ಶನ ಇಂದು

ಶಿರಾ: ತಾವರೆಕೆರೆ ಗ್ರಾಮದಲ್ಲಿ ಶ್ರೀಕೃಷ್ಣ ಸಂಧಾನ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ. ಗ್ರಾಮದ ಶ್ರೀಗಣಪತಿ ದೇವಸ್ಥಾನದ ಆವರಣದಲ್ಲಿ ಸಂಜೆ 8ಕ್ಕೆ ನಾಟಕ ಪ್ರದರ್ಶನವನ್ನು ಬಳ್ಳಾರಿ ಜಿಲ್ಲೆಯ ಸಿರಿಗೆರೆಯ ಧಾತ್ರಿ ರಂಗ ಸಂಸ್ಥೆ ನಡೆಸಿಕೊಡಲಿದೆ. ರಾಜ್ಯದ ವಿವಿಧ ರಂಗ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ಪಡೆದ ಹತ್ತು ಜನ ನಟ ನಟಿಯರ ಈ ತಂಡ ಶ್ರೀಕೃಷ್ಣ ಸಂಧಾನ ಎಂಬ ಹಾಸ್ಯ ನಾಟಕ ಅಭಿನಯಿಸಲಿದ್ದಾರೆ. ಗ್ರಾ.ಪಂ. ಹಾಗೂ ಗ್ರಾಮಸ್ಥರ ಸಹಯೋಗದಲ್ಲಿ ಏರ್ಪಡಿಸಿರುವ ಈ ನಾಟಕ ಪ್ರದರ್ಶನಕ್ಕೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನಾಗರಾಜು ಚಾಲನೆ ನೀಡಲಿದ್ದಾರೆ. ಸುತ್ತಲಿನ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಈ ಹಾಸ್ಯ ನಾಟಕ ಪ್ರದರ್ಶನ ವೀಕ್ಷಿಸುವಂತೆ ಗ್ರಾ.ಪಂ. ಸದಸ್ಯರಾದ ಶಿವಕುಮಾರ್ ನಾಯಕ ಮನವಿ ಮಾಡಿದ್ದಾರೆ.

ಕ್ಷುಲ್ಲಕ ಕಾರಣ: ಯುವಕನಿಗೆ ಮಾರಣಾಂತಿಕ ಹಲ್ಲೆ-ದೂರು

● **ಕನ್ನಡಪ್ರಭವಾರ್ತೆ** ಪಾವಗಡ

ಹಳೇ ದ್ವೇಷ ಹಾಗೂ ಕ್ಷುಲ್ಲಕ ಕಾರಣದಿಂದ ಯುವಕನೊಬ್ಬನನ್ನು ಹಿಗ್ಗಾಮುಗ್ಗಾ ಥಳಿಸಿ ಮಾರಣಾಂತಿಕ ಹಲ್ಲೆ ನಡೆಸಿದ ಪರಿಣಾಮ ಆತನ ಸ್ಥಿತಿ ಗಂಭೀರವಾಗಿದೆ. ಈ ಸಂಬಂಧ ತಾಲೂಕಿನ ಅರಸೀಕೆರೆ ಪೊಲೀಸ್ ಠಾಣೆಯಲ್ಲಿ 5ಮಂದಿ ವಿರುದ್ಧ ಪ್ರಕರಣ ದಾಖಲಾದ ಘಟನೆ ವದನಕಲ್ಲು ಗ್ರಾಮದಲ್ಲಿ ತಡವಾಗಿ ಬೆಳಕಿಗೆ ಬಂದಿದೆ.

ಅರಸೀಕೆರೆ ಪೊಲೀಸ್ ಠಾಣೆ ವ್ಯಾಪ್ತಿಯ ವದನಕಲ್ಲು ಗ್ರಾಮದಲ್ಲಿ ಗೋವರ್ಧನಗಿರಿಯ ಯುವಕನನ್ನು ಗ್ರಾಮದ ಹೊರವಲಯಕ್ಕೆ ಕರೆದ್ಯೊಯ್ದು ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ಶಶಿಕುಮಾರ್ (26) ಹಲ್ಲೆಗೆ ಒಳಗಾಗಿ ಆಸ್ಪತ್ರೆಗೆ ದಾಖಲಾಗಿದ್ದಾನೆ. ಮಹರ್ಷಿ ವಾಲ್ಮೀಕಿ ಮೆರವಣಿಗೆ ಬಳಿಕ, ಆಸಭ್ಯ ವರ್ತನೆ, ಕ್ಷುಲ್ಲಕ್ಕ ಕಾರಣಕ್ಕೆ ಗೋವರ್ಧನಗಿರಿಯ ಶಶಿಕುಮಾರ್ ವಿರುದ್ಧ ಕೆಲವರು ಗಲಾಟೆ ನಡೆಸಿದ್ದಾರೆ. ಶಶಿಕುಮಾರ್‌ನನ್ನು ವದನಕಲ್ಲು ಗ್ರಾಮದ ಹೊರವಲಯಕ್ಕೆ ಬೈಕ್ ನಲ್ಲಿ ಕರೆದೊಯ್ದು ಥಳಿಸಿ ಪರಾರಿಯಾಗಿದ್ದಾರೆ.

ಮಾಹಿತಿ ಮೇರೆಗೆ ಸ್ಥಳೀಯರು ಶಶಿಕುಮಾರ್‌ನನ್ನು ಪಾವಗಡ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಅರಸೀಕೆರೆ ಪೊಲೀಸ್ ಠಾಣೆಗೆ ದೂರು ನೀಡಿದ್ದ ಹಿನ್ನೆಲೆ ಪಿಎಸ್‌ಐ ತಾರಸಿಂಗ್ ಹಲ್ಲೆಯಲ್ಲಿ ನಿರತರಾದ ವದನಕಲ್ಲು ಗ್ರಾಮದ ಐದು ಮಂದಿ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಈ ಸಂಬಂಧ ಆರೋಪಿಗಳ ಪತ್ತೆಗೆ ಶೋಧ ನಡೆಸಿದ ಪೊಲೀಸರು ದಾವಣಗೆರೆಯಲ್ಲಿ ತಲೆಮರೆಸಿಕೊಂಡಿದ್ದ ಪ್ರಕರಣದ ಪ್ರಮುಖ ಆರೋಪಿ ಮಂಜುನಾಥ್ ಹಾಗೂ ರಮೇಶ್‌ನನ್ನು ಬಂಧಿಸಿದ್ದಾರೆ. ಇನ್ನುಳಿದ ಹನುಮಂತರಾಯ, ಅನಿಲ್, ಮಂಜು ಪರಾರಿಯಾಗಿದ್ದಾರೆ ಎಂದು ಸಬ್ ಇನ್ಸ್‌ಪೆಕ್ಟರ್ ಪತ್ರಿಕೆಗೆ ತಿಳಿಸಿದ್ದಾರೆ.

- ಹಳೇ ದ್ವೇಷ, ಕ್ಷುಲ್ಲಕ ಕಾರಣ ಯುವಕನ ಮೇಲೆ ಹಲ್ಲೆ
- 5 ಆರೋಪಿಗಳ ವಿರುದ್ಧ ಅರಸೀಕೆರೆ ಪೊಲೀಸ್ ಠಾಣೆಯಲ್ಲಿ ದೂರ
- ಯುವಕನನ್ನು ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ರವಾನೆ

'ಅಂಬೇಡ್ಕರ್ ವಿಶ್ವಮಾನ್ಯರು'

ತುರುವೇಕೆರೆಯ ಬಿಜೆಪಿ ಕಚೇರಿಯಲ್ಲಿ ಡಾ.ಅಂಬೇಡ್ಕರ್ ಅವರ 67ನೇ ಪರಿನಿರ್ವಾಣ ದಿನವನ್ನು ಆಚರಿಸಲಾಯಿತು. ದುಂಡು ರೇಣುಕಯ್ಯ ಇದ್ದರು.

● **ಕನ್ನಡಪ್ರಭ ವಾರ್ತೆ** ತುರುವೇಕೆರೆ

ಅಂಬೇಡ್ಕರ್ ಅವರು ಭಾರತದ ಸಂವಿಧಾನ ರಚಿಸಿ ವಿಶ್ವಮಾನ್ಯರಾದರು ಎಂದು ತಾಲೂಕು ಬಿಜೆಪಿ ಮಾಜಿ ಅಧ್ಯಕ್ಷ ದುಂಡ ರೇಣುಕಯ್ಯ ಹೇಳಿದರು. ಬಿಜೆಪಿ ಡಾ. ಅಂಬೇಡ್ಕರ್ ಅವರ 67ನೇ ಪರಿನಿರ್ವಾಣ ದಿನಾಚರಣೆ ಆಚರಿಸಿದ ವೇಳೆ ಅವರು ಮಾತನಾಡುತ್ತಿದ್ದರು.

ಅಂಬೇಡ್ಕರ್ ಅವರ ಸಂವಿಧಾನ ಜಾರಿಯಲ್ಲಿರುವುದರಿಂದ ದೇಶದಲ್ಲಿ ಪ್ರಜಾಪ್ರಭುತ್ವ ಇನ್ನೂ ಅಸ್ಥಿತ್ವದಲ್ಲಿದೆ. ನಾವೆಲ್ಲರೂ ಸಂವಿಧಾನ ಗೌರವಿಸಬೇಕೆಂದು ಕರೆ ನೀಡಿದರು.

ಜಿಲ್ಲಾ ಎಸ್ಸಿ ಮೋರ್ಚಾ ಉಪಾಧ್ಯಕ್ಷ ಸೋಮೇನಹಳ್ಳಿ ಜಗದೀಶ್ ಮಾತನಾಡಿ, ಅಂಬೇಡ್ಕರ್ ಅವರು ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವವರ ಬದುಕಿಗೆ ದಾರಿ ದೀಪವಾಗಿದ್ದಾರೆ ಎಂದು ಹೇಳಿದರು.

ಮುಸ್ಲಿಂ ಮುಖಂಡ ರಫೀಕ್, ಕನ್ನಡದ ಕಂದ ವೆಂಕಟೇಶ್, ಸೋಮೇನಹಳ್ಳಿ ಆಕಾಶ್, ದ್ವಾರನಹಳ್ಳಿ ರವೀಂದ್ರ, ಮರಾಠಿಪಾಳ್ಯ ಚಂದ್ರೇಶ್, ಸೋಮಲಾಪುರ ಗಂಗಣ್ಣ, ಅರಮಲ್ಲೇನಹಳ್ಳಿ ಮಾಲಪ್ಪ, ಸಂಗಲಾಪುರ ಕುಮಾರ್, ಹೊಸಳ್ಳಿ ಶ್ರೀಧರ್ ಮುಖಂಡರು ಉಪಸ್ಥಿತರಿದ್ದರು.

ವಿಕಲಚೇತನರಿಗೆ ಸಾಧನ ಸಲಕರಣೆ ವಿತರಿಸಲು ಅರ್ಜಿ ಆಹ್ವಾನ

ತುಮಕೂರು: ವಿಕಲಚೇತನರಿಗಾಗಿ ಶೇ.5 ರ ಅನುದಾನದಲ್ಲಿ ಸಾಧನ ಸಲಕರಣೆಗಳನ್ನು ವಿತರಿಸಲು ಅರ್ಹ ವಿಕಲಚೇತನರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿಕಲಚೇತನರು 20ರೊಳಗಾಗಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿಯನ್ನು ಜಿಲ್ಲೆಯ ಆಯಾ ತಾಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿಗೆ ಸಲ್ಲಿಸಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

IndoStar Home Finance Private Limited
Regd. Office: - Unit No. 305, 3rd Floor, Wing 2/E, Corporate Avenue, Andheri- Ghatkopar Link Road, Chakala, Andheri (East), Mumbai – 400093
CIN : U65990MH2016PTC271587 **Tel:** +91 22 45107701
Email: connect@indostarhfc.com; **Website:** www.indostarhfc.com

ಸೂಚನೆ

ಈ ಸೂಚನೆಯ ಮೂಲಕ ತಿಳಿಸುವುದೇನೆಂದರೇ ಮುಖ್ಯ ನಿರ್ದೇಶನದ ಕಲಂ 93ರ ನಿಯಮಗಳು– ಬ್ಯಾಂಕಿಂಗ್ ಅಲ್ಲದ ಹಣಕಾಸು ಕಂಪನಿ – ಹೌಸಿಂಗ್ ಫೈನಾನ್ಸ್ ಕಂಪನಿ (ರಿಸರ್ವ್ ಬ್ಯಾಂಕ್) ನಿರ್ದೇಶನಗಳು, 2021, ಕಂಪನಿಯ ಶಾಖೆಯ ವಿಳಾಸ : **ಶ್ರೀಯೋಗ್, 1ನೇ ಮಹಡಿ, ಮುನಿಸಿಪಲ್ ಖಾತಾ ನಂ.1221/1554, ಪಿಐಡಿ ನಂ.19574, ಹಳೆಯ ಖಾತಾ ನಂ.1221, ವಾಲ್ಮೀಕಿನಗರ, ತುಮಕೂರು, ಕರ್ನಾಟಕ – 572101**ನ್ನು **ದಿನಾಂಕ : ಮಾರ್ಚ್ 04, 2024**ರ ಕೆಲಸದ ಸಮಯದ ಮುಕ್ತಾಯದಿಂದ ಜಾರಿಗೆ ಬರುವಂತೆ ಮುಚ್ಚಲಾಗುವುದು ಮತ್ತು ಕಾರ್ಯಾಚರಣೆಯನ್ನು ಎದುರುಗಡೆ ಇರುವ ಹತ್ತಿರದ **ಶಾಖಾ ಕಚೇರಿ: 2ನೇ ಮಹಡಿ, ಗೌರಿಶುತ ಆರ್ಕೇಡ್, ವಿದ್ಯಾ ನಗರ, 4ನೇ ಕ್ರಾಸ್, ಎಸ್.ಪಿ. ಕಚೇರಿ ಮೈದಾನದ ಎದುರು, ತುಮಕೂರು, ಕರ್ನಾಟಕ– 572103** ಇಲ್ಲಿಗೆ ಸ್ಥಳಾಂತರಿಸಲಾಗುತ್ತಿದೆ. ಯಾವುದೇ ಸಹಾಯದ ಅಗತ್ಯವಿದ್ದಲ್ಲಿ, ಮೇಲೆ ತಿಳಿಸಿದಂತೆ ನೀವು ಹತ್ತಿರದ ಶಾಖಾ ಕಚೇರಿಯನ್ನು ಸಂಪರ್ಕಿಸಬಹುದು ಅಥವಾ ಇ–ಮೇಲ್ : **connect@indostarhfc.com**ಗೆ ಕಳುಹಿಸಬಹುದು.

ಈ ಸೂಚನೆಯನ್ನು ಕಂಪನಿಯ ವೆಬ್‌ಸೈಟ್ (**www.indostarhfc.com**)ನಲ್ಲಿ ಪಡೆಯಬಹುದು.

ಇಂಡೋಸ್ಟಾರ್ ಹೋಮ್ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್
ಸಹಿ/–
ನಿಧಿ ಸದನಿ
ದಿನಾಂಕ : 06–12–2023 ಕಂಪನಿ ಕಾರ್ಯದರ್ಶಿ

ರಂಗಕಲೆ ಬೆಳೆಯುತ್ತಿರುವುದು ಆಶಾದಾಯಕ

ಡಾ. ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ ಸಾಹಿತಿ ಡಾ. ಚಂದ್ರಶೇಖರ ಕಂಬಾರರ ಸಾಂಬಶಿವ ಪ್ರಹಸನ ನಾಟಕ ಪ್ರದರ್ಶನ

● **ಕನ್ನಡಪ್ರಭ ವಾರ್ತೆ** ತುಮಕೂರು

ಕಂಪನಿ ನಾಟಕಗಳು ತಮ್ಮ ಅಸ್ಥಿತ್ವ ಕಳೆದುಕೊಂಡಿರುವ ಈ ದಿನಗಳಲ್ಲಿ ಕಲಾವಿದರ ತವರೂರು ಎಂದು ಕರೆಯುವ ತುಮಕೂರು ಜಿಲ್ಲೆಯಲ್ಲಿ ಗ್ರಾಮೀಣ ಕ್ರಿಯಾತ್ಮಕ ರಂಗ ತಂಡಗಳು ನಿರಂತರ ರಂಗಚಟುವಟಿಕೆಯಲ್ಲಿ ತೊಡಗಿಕೊಂಡಿರುವುದು ಆಶಾದಾಯಕ ಬೆಳವಣಿಗೆಯಾಗಿದೆ ಎಂದು ಸಿದ್ಧಗಂಗಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ.ಪದ್ಮಜ ವೈ.ಎಂ. ಅಭಿಪ್ರಾಯಪಟ್ಟಿದ್ದಾರೆ.

ನಗರದ ಡಾ. ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಕಾರದಲ್ಲಿ ಗ್ರಾಮೀಣ ಕ್ರಿಯಾತ್ಮಕ ರಂಗ ತಂಡ ಆಯೋಜಿಸಿದ್ದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ. ಚಂದ್ರಶೇಖರ ಕಂಬಾರರ ಸಾಂಬಶಿವ ಪ್ರಹಸನ ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದರು.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರರು 31 ಕ್ಕು ಹೆಚ್ಚು ನಾಟಕಗಳನ್ನು ಬರೆದಿದ್ದಾರೆ. ಬೇಂದ್ರ ಅವರ ನಂತರ ಜನಪದ ಸೊಗಡನ್ನು ಮುಂದಿನ ತಲೆಮಾರಿಗೆ ದಾಟಿಸುವ ಪ್ರಯತ್ನವನ್ನು ಕಂಬಾರರ ನಾಟಕಗಳಲ್ಲಿ ಕಾಣಬಹುದು. ಕಂಬಾರರ ಸಾಂಬಶಿವ ಪ್ರಹಸನ ಹಾಗೂ ಬೇಂದ್ರ ಅವರ ಸಾಯುವ ಆಟ ಎರಡರ ನಡುವೆ ಹೋಲಿಕೆ ಇದೆ. ರಾಜಕೀಯ ವ್ಯವಸ್ಥೆಯನ್ನೇ ವಿಡಂಬನೆ ಮಾಡುವ ಕಥಾವಸ್ತು ಇದಾಗಿ